ಶ್ರೀ ವಾಟಾಳ್ ನಾಗರಾಜ್ : ಇವೋತ್ತೇ ವಿರೋಧ ಪಕ್ಷದ ಎಲ್ಲಾ ನಾಯಕರುಗಳನ್ನು ಕರೆದು ಮಾತುಕತೆಯಾಡಿದರೆ ಸಮಸ್ಯೆ ಬಗೆ ಹರಿಯುತ್ತದೆಂಬುದು ನನ್ನ ಅಭಿಪ್ರಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರು ಸಬ್ ಕಮಿಟಿಯ ಚೇರ್ಮನ್ ಆಗಿದ್ದು, ಆ ಕುರಿತು ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಕೂಡ ಅವರಿಗಿರುತ್ತದೆ. ಅನಂತರ, ಈ ರೀತಿಯಾಗಿ ಮೈನರ್ ಇರಿಗೇಶನ್‌ಗೆ ಕೆಲವು ಅಲಾಟ್‌ಮೆಂಟ್ ಇದೆ. ಆದರೆ, ಬಜೆಟರಿ ಪ್ರಾವಿಜನ್‌ಗೆ ಹೆಚ್ಚಿನ ಹಣವಿಲ್ಲ, ಮೇಂಟನೆನ್ಸ್‌ಗೆ ಹೆಚ್ಚಿನ ಹಣವಿಲ್ಲ. ಅದರ ಬಗ್ಗೆ ನಾನು ಈಗಾಗಲೇ ಮಾನ್ಯ ಅರ್ಥ ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ ಮತ್ತು ಆ ಇಲಾಖೆಯ ಸಂಬಂಧಪಟ್ಟವರೊಂದಿಗೂ ಸತತವಾಗಿ ಸಂಪರ್ಕದಲ್ಲಿದ್ದೇನೆ. ಆದಷ್ಟು ಹೆಚ್ಚಿನ ರೀತಿಯಲ್ಲಿ ಇದಕ್ಕೆ ಹಣ ಸಿಗಬಹುದೆಂದು ನಾನು ತಿಳಿದಿದ್ದೇನೆ. ಅದಕ್ಕೋಸ್ಕರ ಇದರಲ್ಲಿ ಬಜೆಟ್ ಕೊರತೆ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಹೆಚ್ಚುವರಿ ಬಸ್ಸುಗಳನ್ನು ಬಿಡುವುದು

111 (842) : ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿರುವ ಸಾರಿಗೆ ಸಂಸ್ಥೆಯ ಬಸ್ ಡಿಪೋಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಈ ಎಲ್ಲಾ ಡಿಪೋಗಳಲ್ಲಿ ಕ್ರಮಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಎರಡು ವರ್ಷಗಳಿಂದ ಈ ಘಟಕಗಳಿಗೆ ಒದಗಿಸಿರುವ ಹೊಸ ಬಸ್ಸುಗಳ ಸಂಖ್ಯೆ ಎಷ್ಟು;

ಇ) ಮಡಿಕೇರಿ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರಮಿಸುತ್ತಿರುವ ಬಸ್ಸುಗಳು ಹಾಗೂ ಮಾರ್ಗಗಳು ಎಷ್ಟು ಹೊಸ ಬಸ್ ಮಾರ್ಗಗಳನ್ನು ಕಲ್ಪಿಸಲು ಸಾರಿಗೆ ಸಂಸ್ಥೆ ಯಾವ ಕ್ರಮ ಕೈಗೊಂಡಿದೆ.

ಈ) ಗ್ರಾಮೀಣ ಸಾರಿಗೆ ವ್ಯವಸ್ಥೆಯ ಸುಧಾರಣೆಗಾಗಿ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಹಾಗೂ ಅದಕ್ಕಾಗಿ ಈ ಮಾರ್ಗಗಳಿಗೆ ಬೇಕಾಗುವ ಬಸ್ಸುಗಳೆಷ್ಟು;

ಉ) ಈ ಬಸ್ಸುಗಳನ್ನು ಯಾವಾಗ ಒದಗಿಸಲಾಗುತ್ತದೆ ಹಾಗೂ ಯಾವಾಗಿನಿಂದ ಕ್ರಮಿಸಲು ಬಿಡಲಾಗುವುದು (ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಒಂದು. ಈ ಘಟಕವು ಮಡಿಕೇರಿಯಲ್ಲಿದೆ (ಮಡಿಕೇರಿ ತಾಲ್ಲೂಕು).

ಆ) 90 ಬಸ್ಸುಗಳು. ಎರಡು ವರ್ಷಗಳಲ್ಲಿ 35 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ.

ಇ) 73 ಬಸ್ಸುಗಳನ್ನು ಆಚರಿಸುತ್ತಿದ್ದು, ಇವುಗಳು 51 ಮಾರ್ಗಗಳಲ್ಲಿ ಕಾರ್ಯಾಚರಣೆಗೊಳ್ಳುತ್ತಿವೆ. 5 (ಐದು) ಹೊಸ ಅನುಸೂಚಿಗಳನ್ನು ಕಳೆದ 6 ತಿಂಗಳಲ್ಲಿ ಪ್ರಾರಂಭಿಸಲಾಗಿದೆ.

ಈ) ಮಡಿಕೇರಿ ಘಟಕದ ವತಿಯಿಂದ 6(ಆರು) ಬಸ್ಸುಗಳನ್ನು ಮಡಿಕೇರಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಆಚರಣೆಗೊಳಿಸಲಾಗುತ್ತಿದೆ.

8(ಎಂಟು) ಬಸ್ಸುಗಳು ಬೇಕು.

ಉ) ಪ್ರಶ್ನೆ (ಈ) ಯಲ್ಲಿನ ಮಾರ್ಗಗಳು ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುತ್ತಿದ್ದು, ಪ್ರಯಾಣಿಕರ ಒತ್ತಡ ಮತ್ತು ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ವಹಿಸಲಾಗುವುದು.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ನಾನು ಗ್ರಾಮೀಣ ಸಾರಿಗೆ ಬಗ್ಗೆ ವಿವರ ಕೇಳಿದ್ದೆ. ಅವರು ಕೊಟ್ಟಿರುವ ಉತ್ತರದಲ್ಲಿ, 'ಮಡಿಕೇರಿ ಕ್ಷೇತ್ರದಲ್ಲಿ ಆರು ಬಸ್ಸುಗಳು ಓಡುತ್ತಿದೆ, ಇನ್ನೂ ಎಂಟು ಬಸ್ಸುಗಳು ಬೇಕಾಗಿದೆ' ಎಂದು ತಿಳಿಸಿದ್ದಾರೆ. ಆದರೆ, ವಾಸ್ತವವಾಗಿ ಇರುವುದು ನಾಲ್ಕೇ ಗ್ರಾಮೀಣ ಸಾರಿಗೆ ಬಸ್ಸುಗಳು. ಆ ನಾಲ್ಕು ಬಸ್ಸುಗಳಲ್ಲಿ ಒಂದು ಬಸ್ಸನ್ನು ದಕ್ಷಿಣ ಕನ್ನಡ ಜಿಲ್ಲೆಯ ಗಡಿಭಾಗದಲ್ಲಿ ಜೊಂಬುದಬ್ಬಡ್ಕ ಎಂಬ ಒಂದು ಗ್ರಾಮವಿದ್ದು, ಚುನಾವಣೆ ಘೋಷಣೆಯಾದ ಬಳಿಕ ಅಲ್ಲಿಗೆ ಬಸ್ಸುಗಳನ್ನು ಓಡಿಸಲು ಪ್ರಾರಂಭಿಸಿದರು. ಅದಕ್ಕಾಗಿ ದೊಡ್ಡ ಸಮಾರಂಭ ಏರ್ಪಡಿಸಿದರು. ಆದರೆ, ಒಂದೇ ತಿಂಗಳಿನಲ್ಲಿ ಆ ಬಸ್ಸನ್ನು ನಿಲ್ಲಿಸಿದ್ದಾರೆ! ಇತ್ತೀಚೆಗೆ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಡಿಕೇರಿ, ಸಿದ್ದಾಪುರ, ಮತ್ತು ಪಿರಿಯಾಪಟ್ಟಣಕ್ಕೆ ಕ್ರಮಿಸಲು ಸಿದ್ದಾಪುರದಿಂದ ಗ್ರಾಮಾಂತರ ಪ್ರದೇಶದೊಳಗೆ ಹೋಗಿ ಒಂದು ಸಮಾರಂಭ ಉದ್ಘಾಟನೆ ಮಾಡಿದರು. ಏನು ಇವೊತ್ತು ನಾಲ್ಕು ಬಸ್ಸುಗಳನ್ನು ಸ್ಟೇಟ್ ಹೈವೇಯಲ್ಲಿ ಓಡಿಸುವ ಒಂದು ಪ್ರವೃತ್ತಿ ಕಾಣುತ್ತಿದೆ, ಮತ್ತೆ ತಾವು ಹೇಳಿದಂತೆ, 8–9 ಬಸ್ಸುಗಳ ಪೈಕಿ ಮಡಿಕೇರಿ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಸುಮಾರು ಹದಿನೈದು ಬಸ್ಸುಗಳು ಬೇಕೆಂಬ ಪ್ರಸ್ತಾವನೆಯನ್ನೂ ಕೂಡ ಅಲ್ಲಿಯ ಡಿಪೋ ಮುಖಾಂತರ ಕಳುಹಿಸಿಕೊಡಲಾಗಿದೆ. ಇಲ್ಲಿಗೆ ಬರುತ್ತಿದ್ದ ಬಸ್ಸುಗಳನ್ನು ನಿಲ್ಲಿಸಿರುವ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಅದನ್ನು ಓಡಿಸುವುದಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತೀರಿ? ಉಳಿದ ಹದಿನೈದು ರೂಟುಗಳನ್ನು ಗುರ್ತಿಸಿದ್ದು, ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬ ವಿವರಣೆ ಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ ಸನ್ಮಾನ್ಯ ಅಧ್ಯಕ್ಷರೆ, ಕೂರ್ಗ್ ಜಿಲ್ಲೆ ಇದು non-monopoly district. ನಮಗೆ ಇಲ್ಲಿ monopoly ಇಲ್ಲ. ಅಥವಾ ಕೆಎಸ್ಆರ್‌ಟಿಸಿ ಬಸ್ಸುಗಳನ್ನು ಎಲ್ಲಾ ರೂಟುಗಳಿಗೂ ತೆಗೆದುಕೊಂಡು ಹೋಗಬೇಕೆಂಬ ಅಧಿಕಾರ ಇಲ್ಲ. ಅದಕ್ಕಾಗಿ ಇದು non-monopoly district ಆಗಿರುವ ಕಾರಣ ಸುಮಾರು 250 ಪ್ರೈವೇಟ್ ಬಸ್ಸುಗಳು ಓಡುತ್ತಿವೆ. ನಮ್ಮ ಕೆಲವು ಜನರ ಬೇಡಿಕೆ ಮೇಲೆ ಅಥವಾ ಜನಪ್ರತಿನಿಧಿಗಳಾದ ತಾವು ಹೇಳಿದ ಮೇಲೆ ಸುಮಾರು 90 ಬಸ್ಸುಗಳು ಆ ಡಿಪೋನಲ್ಲಿವೆ. ಅದರಲ್ಲಿ ಸುಮಾರು 35 ಮಾರ್ಗಗಳಲ್ಲಿ ಓಡುತ್ತಿವೆ. ಹೆಚ್ಚು–ಕಡಿಮೆ ಸುಮಾರು 51 ರೂಟುಗಳನ್ನು ಇವೊತ್ತು ಕೆಎಸ್ಆರ್‌ಟಿಸಿಯವರು ತೆಗೆದುಕೊಂಡಿದ್ದಾರೆ.

ಚುನಾವಣೆಯಲ್ಲಿ ಕೆಲವು ಬಸ್ ಹಾಕಿ ನಂತರ ನಿಲ್ಲಿಸಿದರು ಎಂದು ಹೇಳುತ್ತಾರೆ, ಅವು ಯಾವ ಬಸ್, ಯಾವ ರೂಟ್ ಎಂದು ವಿವರ ಕೊಟ್ಟರೆ

ಖಂಡಿತವಾಗಿ ಎಲ್ಲಿ ಫೀಸಿಬಲ್ ಇದೆ ಅಲ್ಲಿ ಪುನ: ಓಡಿಸತಕ್ಕಂತಹ ವ್ಯವಸ್ಥೆಯನ್ನು ಖಂಡಿತವಾಗಿ ಮಾಡುತ್ತೇವೆ. ಮತ್ತು ಎಂಟು ಬಸ್ಸುಗಳನ್ನು ಹೊಸದಾಗಿ ಕೇಳಿದ್ದಾರೆ, ಹಣದ ಲಭ್ಯತೆ ಮೇಲೆ ಹೊಸ ಬಸ್‌ಗಳನ್ನು ನಾವು ಕೊಟ್ಟುಕೊಂಡು ಹೋಗುತ್ತೇವೆ. ಈಗಾಗಲೇ ನಾವು 90ರಲ್ಲಿ 35 ಬಸ್‌ಗಳನ್ನು ರಿಪ್ಲೇಸ್ ಮಾಡಿ ಹೊಸ ಬಸ್‌ಗಳನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಈಗ ಪುನಃ ನಿಮಗೆ ಬೇಕಾಗಿರುವ ಮಡಿಕೇರಿ ಘಟಕಕ್ಕೆ ಸುಮಾರು ಎಂಟು ಬಸ್ಸುಗಳು ಬೇಕೆಂದು ಹೇಳಿದ್ದೀರಿ, ಅದನ್ನು ನಾನು ಹಣಕಾಸಿನ ವ್ಯವಸ್ಥೆ ನೋಡಿಕೊಂಡು ಹಂತ ಹಂತವಾಗಿ ಕೊಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನನ್ನ ಇಡೀ ಕ್ಷೇತ್ರದಲ್ಲಿ ಎರಡೇ ಕಾಲೇಜುಗಳಿವೆ ಇದು ಬಿಟ್ಟರೆ ಬೇರೆ ಯಾವುದೇ ಸರ್ಕಾರಿ ಕಾಲೇಜು ಅಥವಾ ಖಾಸಗಿ ಕಾಲೇಜುಗಳಿಲ್ಲ ಎಲ್ಲಾ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಿಂದ ಬರಬೇಕಾಗಿದೆ. ಇವತ್ತು ಎಂಟು ಬಸ್ ಏನು ಕೇಳಿದ್ದಾರೆ, ನನಗೆ ಮಾಹಿತಿ ಇದ್ದ ಪ್ರಕಾರ ಸುಮಾರು 15 ಬಸ್‌ಗಳು ಬೇಕಾಗಿವೆ. ರಸ್ತೆಗಳು ಬಸ್ಸುಗಳು ಓಡಾಡುವಂತಹ ರಸ್ತೆಗಳಿವೆ ಇದರಲ್ಲಿ ಇರುವಂತಹ ನಾಲ್ಕು ಬಸ್ಸುಗಳನ್ನು ನಿಲ್ಲಿಸಿ ಮುಖ್ಯ ರಸ್ತೆಯಲ್ಲಿ ಓಡಿಸುವಂತಹ ಪ್ರವೃತ್ತಿಯಾಗಬೇಕು. ಉದಾಹರಣೆಗೆ ಮಡಿಕೇರಿಯಿಂದ ಕುಶಾಲನಗರಕ್ಕೆ ಒಂದು ಗ್ರಾಮೀಣ ಸಾರಿಗೆ ಬಸ್ ಹಾಕಿದ್ದರು. ಆದರೆ ಅದನ್ನು ಹಾಕಿದ್ದು ಮಡಿಕೇರಿ, ಸಿದ್ದಾಪುರ, ಘಟ್ಟದಹಳ್ಳ ಎಂದು ಒಳಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಕುಶಾಲನಗರಕ್ಕೆ ಹೋಗಬೇಕೆಂದು. ಆದರೆ ಇವತ್ತು ಅದನ್ನು ನೇರವಾಗಿ ಸ್ಟೇಟ್ ಹೈವೇಯಲ್ಲಿ ಓಡಿಸುವಂತಹ ಪ್ರವೃತ್ತಿಯಾಗಿದೆ, ಚೊಂಬು ಅಂತಹ ಗ್ರಾಮಕ್ಕೆ ಒಂದು ತಿಂಗಳು ಓಡಿಸಿ ನಿಲ್ಲಿಸಿದರು. ಇದನ್ನು ತಕ್ಷಣ ಸರಿ ಮಾಡಬೇಕು. ಅದರ ಜೊತೆಗೆ ಇವತ್ತು ಜಿಲ್ಲೆಯಲ್ಲಿ ಒಂದು ಡಿಪೋ ಮಾತ್ರ ಇದೆ. ಕನಿಷ್ಟ ಇನ್ನೊಂದು ಡಿಪೋ ಆದರೂ ತೆರೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮನಾಪಲಿ ರೂಟ್ ಇಲ್ಲ, ನಾನ್ ಮನಾಪಲಿ ಇರುವ ಕಾರಣ ಪ್ರೈವೇಟ್ ಬಸ್‌ಗಳು ಹೆಚ್ಚಿಗೆ ಹೋಗುತ್ತವೆ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದೂ ಕೂಡ ಹೇಳಿದ್ದೀರಿ. ಅದು ಅನುಕೂಲವಾಗುವುದು ಯಾವಾಗ ಎಂದರೆ, ಬೇರೆ ರೂಟ್‌ಗಳು ನಮಗೆ ಲಾಭದಾಯಕ ಇದ್ದಾಗ ಈ ರೂಟ್‌ಗಳನ್ನು ಕೂಡ ನಾವು ಒಂದೊಂದು ಸೇರಿಸಬಹುದು. ಲಾಭದ್ದೆಲ್ಲಾ ಪ್ರೈವೇಟ್‌ನವರಿಗೆ, ಲುಕ್ಸಾನು ಮಾತ್ರ ನನಗೆ ಎಂದರೆ, ಆಗ ಬಹಳ ಕಷ್ಟವಾಗುತ್ತದೆ. ಇದನ್ನು ನೋಡಿಕೊಂಡು ತಾವು ಹೇಳಿದ ಹಾಗೆ ರೀಎಕ್ಸಾಮಿನ್ ಮಾಡಿ ನಾವು ಎಷ್ಟು ಕೊಡಬಹುದು, ಅದರ ಬಗ್ಗೆ ಚಿಂತನೆ ಮಾಡುತ್ತೇನೆ.